ಕರ್ನಾಟಕ ಸರ್ಕಾರ

| | | |
|---|---|---|
| ತೋಟಗಾರಿಕೆ ಇಲಾಖೆ, ಬೆಂಗಳೂರು | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ. |

ಆರ್‌ಡಿಸಿ-ಇಜಿಎಸ್/672/2022 ದಿನಾಂಕ: 16-11-2022

## ಜಂಟಿ ಸುತ್ತೋಲೆ

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಅಪ್ರಧಾನ ಹಣ್ಣಿನ ಬೆಳೆಗಳ (Minor Fruits/Under Utilised fruits crops) ಪ್ರದೇಶಾಭಿವೃದ್ಧಿಯನ್ನು ಗುಚ್ಚ ಗ್ರಾಮಗಳಲ್ಲಿ (Cluster Villages) ಕೈಗೊಳ್ಳುವ ಕುರಿತು.

***********

ಕರ್ನಾಟಕವು ತೋಟಗಾರಿಕೆ ಬೆಳೆಗಳ ಪ್ರದೇಶ ಹಾಗೂ ಉತ್ಪಾದನೆಯಲ್ಲಿ ಪ್ರಮುಖ ರಾಜ್ಯವಾಗಿದೆ. ಇಲ್ಲಿ ಕಾಣಬರುವ ವೈವಿಧ್ಯಮಯ ಭೂ-ಹವಾಗುಣ ಪರಿಸ್ಥಿತಿಗಳಲ್ಲಿ ವಿವಿಧ ಹಣ್ಣಿನ ಬೆಳೆಗಳನ್ನು ವರ್ಷವಿಡೀ ಬೆಳೆಯಬಹುದಾಗಿದೆ. ದೇಶದ ವಿವಿಧ ಭಾಗಗಳಲ್ಲಿ ಬೆಳೆಯುವ ಎಲ್ಲಾ ಬಗೆಯ ಹಣ್ಣುಗಳನ್ನು ನಮ್ಮ ರಾಜ್ಯದಲ್ಲಿ ಭಾಗಶಃ ಬೆಳೆಯಲಾಗುತ್ತಿದೆ. ಪ್ರಸ್ತುತ ಮಾವು, ಬಾಳೆ, ದಾಳಿಂಬೆ, ಪಪ್ಪಾಯಿ ಇತ್ಯಾದಿ ಹಣ್ಣುಗಳ ಉತ್ಪಾದನೆಯಲ್ಲಿ ರಾಜ್ಯವು ಮುಂಚೂಣಿಯಲ್ಲಿದೆ. ಇದಲ್ಲದೇ ಇತರೆ ಹಲವಾರು ಅಪ್ರಧಾನ ಹಾಗೂ ಕಾಡು ಜಾತಿಯ ಹಣ್ಣುಗಳಿಗೆ ಪ್ರಸಿದ್ಧಿಯಾಗಿದೆ.

ಒಂದು ಕಾಲದಲ್ಲಿ ನೈಸರ್ಗಿಕವಾಗಿ ಬೆಳೆಯುತ್ತಿದ್ದ ಅಪ್ರಧಾನ ಹಾಗೂ ಕಾಡು ಜಾತಿಯ ಹಣ್ಣುಗಳು ನಗರೀಕರಣ, ವಾಣಿಜ್ಯೀಕರಣ, ಮಾಹಿತಿ ಕೊರತೆ ಮತ್ತು ಜಾಗತೀಕರಣದಿಂದಾಗಿ ಇವುಗಳ ಪ್ರದೇಶ ಹಾಗೂ ಉತ್ಪಾದನೆ ಕ್ರಮೇಣ ಕಡಿಮೆಯಾಗುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಜನಸಾಮಾನ್ಯರು ಆರೋಗ್ಯ ರಕ್ಷಣೆಯ ಕಡೆಗೆ ಹೆಚ್ಚಿನ ಗಮನವೀಯುತ್ತಿರುವ ಕಾರಣ ಅಪ್ರಧಾನ ಹಾಗೂ ಕಾಡು ಜಾತಿಯ ಹಣ್ಣುಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಅಲ್ಲದೇ ಸದರಿ ಹಣ್ಣಿನ ಬೆಳೆಗಳು ತೀವ್ರ ಬರ ಪರಿಸ್ಥಿತಿಯನ್ನು ನಿಗ್ರಹಿಸಿ ಸಾಕಷ್ಟು ಸಮಾಧಾನಕರವಾದ ಇಳುವರಿಯನ್ನು ನೀಡುವ ಗುಣ ಹೊಂದಿರುವ ಕಾರಣ, ಕಡಿಮೆ ಮಳೆ ಬೀಳುವ ಮತ್ತು ಬರ ಪೀಡಿತ ಪ್ರದೇಶಗಳಲ್ಲಿ ಈ ಬೆಳೆಗಳನ್ನು ಬೆಳೆಸುವುದರ ಅವಶ್ಯಕತೆ ಹೆಚ್ಚಾಗಿ ಕಂಡುಬಂದಿರುತ್ತದೆ. ಸದರಿ ಬೆಳೆಗಳನ್ನು ಬೆಳೆದು, ಮೌಲ್ಯವರ್ಧಿತ ಉತ್ಪನ್ನಗಳಾಗಿ ಪರಿವರ್ತಿಸಬಹುದಾಗಿದ್ದು, (Jam, Jelly, Juice etc.,). ಇದರಿಂದ ರೈತರ ಆದಾಯವು ವೃದ್ಧಿಯಾಗುವುದರ ಜೊತೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಇನ್ನು ಅನೇಕ ರೈತರಿಗೆ ಸ್ಥಳೀಯವಾಗಿ ಉದ್ಯೋಗವಕಾಶವನ್ನು ಕಲ್ಪಿಸುತ್ತದೆ.

ಆದ್ದರಿಂದ ಸಾಂಪ್ರದಾಯಿಕವಾಗಿ ಬೆಳೆಯುತ್ತಿದ್ದ ಹಣ್ಣುಗಳ ಪ್ರದೇಶಾಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡುವ ಅವಶ್ಯಕತೆಯಿದ್ದು, ಈ ಕೆಳಕಂಡ ಬೆಳೆಗಳನ್ನು ಬೆಳೆಯಲು ನರೇಗಾ ಯೋಜನೆಯಡಿ ಅವಕಾಶ ಕಲ್ಪಿಸಲಾಗುತ್ತಿದೆ.

**ರಾಜ್ಯದಲ್ಲಿ ಬೆಳೆಯಬಹುದಾದದ ಅಪ್ರಧಾನ ಹಣ್ಣಿನ ಬೆಳೆಗಳ ವಿವರ:**

| ಕ್ರ.ಸಂ | ಅಪ್ರಧಾನ ಬೆಳೆ | ವೈಜ್ಞಾನಿಕ ಹೆಸರು |
|---|---|---|
| 1 | ಬೆಟ್ಟದ ನೆಲ್ಲಿ (Aonla) | *Emblica officinalis* |
| 2 | ಬಾರೆ (Ber) | *Ziziphus mauritiana* |
| 3 | ಅಂಜೂರ (Fig) | *Ficus carica* |
| 4 | ಕವಳೆ ಹಣ್ಣು (Karonda) | *Carissa carandas* |
| 5 | ಪ್ಯಾಶಾನ್ ಹಣ್ಣು (Passion Fruit) | *Passiflora edulis* |
| 6 | ನಕ್ಷತ್ರ ಹಣ್ಣು (Star Fruit) | *Averrhoa carambola* |
| 7 | ಹಲಸು (Jack fruit) | *Artocarpus heterophyllus* |
| 8 | ನೇರಳೆ (Jamoon) | *Syzygium cumini* |
| 9 | ಬೆಣ್ಣೆಹಣ್ಣು (Butter Fruit) | *Persea americana* |
| 10 | ಡ್ರಾಗನ್ ಹಣ್ಣು (Dragon Fruit) | *Selenicereus undatus* |
| 11 | ರಾಮ್‌ಬೂಟನ್ (Rambutan) | *Nephelium lappaceum* |
| 12 | ಫಾಲ್ಸ (Phalsa) | *Grewia asiatica* |
| 13 | ಸೀತಾಫಲ (Custard apple) | *Annona squamosa* |
| 14 | ಅಮಟೆಕಾಯಿ (Hog Plum) | *Spondias mombin* |
| 15 | ಪನ್ನೇರಳೆ (Rose Apple) | *Syzygium aqueum* |
| 16 | ಮ್ಯಾಂಗೋಸ್ಟೀನ್ (Mangosteen) | *Garcinia mangostana* |
| 17 | ದುರಿಯಾನ್ (Durian) | *Durio zibethinus L.;* |
| 18 | ಹುಣಸೆ (Tamarind) | *Tamarindus indica* |
| 19 | ಕಿರು ನೆಲ್ಲಿ (Aonla) | *Phyllanthus emblica* |
| 20 | ಬೆಲ್ಲದ ಹಣ್ಣು (Wood apple) | *Limonia acidissima* |

**ಅಪ್ರಧಾನ ಹಣ್ಣುಗಳ ಮಹತ್ವ (Importance of underutilized Fruits):**

- ಅಪ್ರಧಾನ ಹಣ್ಣುಗಳು ಸ್ಥಳೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ ಮತ್ತು ಸಾಂಪ್ರದಾಯಿಕವಾಗಿ ತಯಾರಿಸುವ ಆಹಾರಗಳಲ್ಲಿ ಉಪಯೋಗಿಸಲಾಗುತ್ತಿದ್ದು, ವಿಭಿನ್ನ ಮತ್ತು ವಿಶೇಷ ಗುಣಗಳನ್ನು ಹೊಂದಿರುತ್ತದೆ.
- ಈ ಬೆಳೆಗಳನ್ನು ವಿವಿಧ ಹವಾಮಾನಗಳಲ್ಲಿ ಬೆಳೆಯಬಹುದಾಗಿದ್ದು ಮತ್ತು ಹವಾಮಾನದ ಬದಲಾವಣೆಗೆ ಹೊಂದಿಕೊಳ್ಳುತ್ತವೆ.
- ಈ ಬೆಳೆಗಳು ಜೈವಿಕ ಮತ್ತು ಅಜೈವಿಕ ಒತ್ತಡಗಳನ್ನು ತಡೆದುಕೊಳ್ಳುತ್ತವೆ.
- ಈ ಬೆಳೆಗಳನ್ನು ಕಡಿಮೆ ಖರ್ಚಿನಲ್ಲಿ ಬೆಳೆಯಬಹುದಾಗಿದೆ.
- ಅಪ್ರಧಾನ ಹಣ್ಣುಗಳು ಜೀವಸತ್ವ ಖನಿಜಗಳನ್ನು ಹೆಚ್ಚಾಗಿರುವುದರೊಂದಿಗೆ ಔಷಧಿಯ ಗುಣಗಳನ್ನು ಸಹ ಹೊಂದಿರುತ್ತವೆ.
- ಈ ಬೆಳೆಗಳನ್ನು ಉಪಯೋಗಿಸಿ ಹೆಚ್ಚಿನ ಮೌಲ್ಯವರ್ಧಕ ಉತ್ಪನ್ನಗಳನ್ನು (Jam, Jelly, Pickle) ತಯಾರಿಸಬಹುದಾಗಿದೆ.
- ಈ ಬೆಳಗಳು ಆಹಾರ ಮತ್ತು ಪೋಷಕಾಂಶಗಳಿಗೆ ಗಣನೀಯ ಕೊಡುಗೆ ನೀಡುವುದರೊಂದಿಗೆ ಮಾರುಕಟ್ಟೆ ಮತ್ತು ಹವಾಮಾನ ಅನಿಶ್ಚಿತಗಳಿಂದ ರಕ್ಷಿಸಿ ಸುಸ್ಥಿರತೆಯನ್ನು ಹೆಚ್ಚಿಸಲು ದಾರಿ ಮಾಡಿಕೊಡುತ್ತದೆ.

**ಅಪ್ರಧಾನ ಹಣ್ಣುಗಳಲ್ಲಿಯ ಇತಿ-ಮಿತಿಗಳು. (Limitations in underutilized crops):**

- ಪ್ರಮುಖ ಹಣ್ಣುಗಳಿಗೆ ಹೋಲಿಸಿದಾಗ ಅಪ್ರಧಾನ ಹಣ್ಣುಗಳ ಮಹತ್ವ, ಬೇಸಾಯ ಪದ್ಧತಿ, ಪೋಷಕಾಂಶಗಳು ಮತ್ತು ಬಳಕೆಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದೇ ಇರುವುದು.
- ಮಾರುಕಟ್ಟೆ ಅವಕಾಶಗಳು ಮತ್ತು ಆರ್ಥಿಕ ಮಹತ್ವದ ಬಗ್ಗೆ ಮಾಹಿತಿ ಇಲ್ಲದೇ ಇರುವುದು.
- ಸುಧಾರಿತ ತಳಿಗಳ ಲಭ್ಯತೆ ಇಲ್ಲದಿರುವುದು ಹಾಗೂ ಇಳುವರಿಗೆ ಹೆಚ್ಚಿನ ಸಮಯ ತೆಗೆದುಕೊಳ್ಳುವುದು.
- ಕಡಿಮೆ ಇಳುವರಿ ಮತ್ತು ಉತ್ಪಾದಕರ ಆಸಕ್ತಿ ಕೊರತೆಯಿಂದ.
- ಸದರಿ ಬೆಳೆಗಳ ಉತ್ಪನ್ನಗಳ Forward linkage ಗೆ ಪೂರಕವಾಗಿ ಮೌಲ್ಯವರ್ಧನೆ (Value addition) ಮತ್ತು ಮಾರುಕಟ್ಟೆ (Marketing) ಕುರಿತು ಕೌಶಲ್ಯ ತರಬೇತಿ ಇಲ್ಲದೇ ಇರುವುದು.
- ಸದರಿ ಬೆಳೆಗಳ ಉತ್ಪನ್ನಗಳ ಮಾರಾಟಕ್ಕೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ digital Marketing ಸೌಲಭ್ಯಗಳು ಇಲ್ಲದೇ ಇರುವುದು.

ಈ ನಿಟ್ಟಿನಲ್ಲಿ **ಗ್ರಾಮೀಣಾಭಿವೃದ್ಧಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಂಸ್ಥೆ (NRLM) ಜಂಟಿ ಸಹಯೋಗದೊಂದಿಗೆ** ಪ್ರಸ್ತುತ ವರ್ಷ ಅಭಿಯಾನ ರೂಪದಲ್ಲಿ (Mission Mode) ನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಸ್ವಸಹಾಯ ಸಂಘಗಳ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಅಪ್ರಧಾನ ಹಣ್ಣಿನ ಬೆಳೆಗಳ ಪ್ರದೇಶ ವಿಸ್ತರಣೆ ಮಾಡಿ, ಸ್ಥಳೀಯವಾಗಿ ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಹೊಸ ಕಾರ್ಯಕ್ರಮ ರೂಪಿಸಿಕೊಂಡು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದೆ.

1. **ಫಲಾನುಭವಿಗಳ ಆಯ್ಕೆ:**

ನರೇಗಾ ಯೋಜನೆಯಡಿ ಈ ಕೆಳಕಂಡ ಪ್ರವರ್ಗಗಳಿಗೆ ಸೇರಿದ ಕುಟುಂಬಗಳ/ಫಲಾನುಭವಿಗಳು ವೈಯಕ್ತಿಕ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

- ಪರಿಶಿಷ್ಟ ಜಾತಿ
- ಪರಿಶಿಷ್ಟ ಪಂಗಡ
- ಅಲೆಮಾರಿ ಜನಗಳು
- ಪ್ರಕಟಣೆಯಿಂದ ತೆಗೆದು ಹಾಕಿದ ಬುಡಕಟ್ಟು ಜನಾಂಗದವರು.
- ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಇತರೆ ಕುಟುಂಬಗಳು
- ಸ್ತ್ರೀ ಪ್ರಧಾನ ಕುಟುಂಬಗಳು
- ವಿಕಲಚೇತನ ಪ್ರಧಾನ ಕುಟುಂಬಗಳು
- ಭೂ ಸುಧಾರಣಾ ಫಲಾನುಭವಿಗಳು.
- ಪ್ರಧಾನ ಮಂತ್ರಿ ಆವಾಜ್ ಯೋಜನೆಯ ಫಲಾನುಭವಿಗಳು.

ಅನುಸೂಚಿತ ಬುಡಕಟ್ಟುಗಳ ಇತರೆ ಪರಂಪರಿಕ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ 2006 (2007 ರ 2) ಮತ್ತು ಮೇಲಿನ ಪ್ರವರ್ಗಗಳಡಿ ಅರ್ಹ ಫಲಾನುಭವಿಗಳು ಪೂರ್ಣವಾದ ನಂತರ ಕೃಷಿ ಋಣ ಮನ್ನ ಮತ್ತು ಋಣ ಪರಿಹಾರ ಯೋಜನೆ, 2008 ರಲ್ಲಿ ವಿವರಿಸಿದಂತೆ ಹಾಗೂ ಉದ್ಯೋಗ ಚೀಟಿ ಹೊಂದಿರುವ ಕುಟುಂಬಗಳ ಕನಿಷ್ಠ ಒಬ್ಬ ಸದಸ್ಯರು ತಮ್ಮ ಜಮೀನಿನಲ್ಲಿ ಅಥವಾ ತೋಟದಲ್ಲಿ ಕೈಗೊಳ್ಳುವ ಕಾಮಗಾರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ ಷರತ್ತಿಗೆ ಒಳಪಟ್ಟಿರುವ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನುಗಳಲ್ಲಿ ಕೈಗೊಳ್ಳುವ ಕಾಮಗಾರಿಗಳು. 2021-22 ನೇ ಸಾಲಿನ ವಾರ್ಷಿಕ ಪ್ರಧಾನ ಸುತ್ತೋಲೆಯ ಕಂಡಿಕೆ 7.4.12 ಗೆ ಪೂರಕವಾಗಿ ಪತ್ರ ಸಂಖ್ಯೆ: RDC-EGS/149/2021, ದಿನಾಂಕ: 02-08-2021 ರಲ್ಲಿ ತಿಳಿಸಿದಂತೆ ವೈಯಕ್ತಿಕ ಕಾಮಗಾರಿಗಳಿಗೆ ಒದಗಿಸುವ ಒಟ್ಟು ಸಹಾಯದ ಮೊತ್ತವನ್ನು ರೂ. 2.50 ಲಕ್ಷಗಳಿಗೆ ನರೇಗಾದಲ್ಲಿ ಮಿತಿಯೊಳಗಿರುವುದನ್ನು ಖಾತ್ರಿ ಪಡಿಸಿಕೊಂಡು ಅನುಷ್ಠಾನಗೊಳಿಸುವುದು

2. <u>ಕ್ರಿಯಾ ಯೋಜನೆ ಸಿದ್ಧಪಡಿಸುವಿಕೆ:</u>

ಸದರಿ ಬೆಳೆಗಳನ್ನು ಬೆಳೆಯಲು ಸೂಕ್ತವಾದ ಪ್ರದೇಶಗಳನ್ನು ಗುರುತಿಸಿ, ಫಲಾನುಭವಿಗಳನ್ನು ಆಯ್ಕೆ ಮಾಡಿ, ಕ್ರಿಯಾಯೋಜನೆಯನ್ನು ರೂಪಿಸಿ, ಅನುಮೋದಿಸಿಕೊಂಡು ಅನುಷ್ಠಾನಿಸಲು ತೋಟಗಾರಿಕೆ ಇಲಾಖೆ ಮತ್ತು ಎನ್‌ಆರ್‌ಎಲ್‌ಎಮ್ ಸಂಸ್ಥೆಯು ಕ್ರಮವಹಿಸುವುದು.

3. <u>ಅನುಷ್ಠಾನ ಕ್ರಮಗಳು ಮತ್ತು ಅನುಷ್ಠಾನ ಇಲಾಖೆಗಳ ಜವಾಬ್ದಾರಿಗಳು:</u>

ಸದರಿ ಬೆಳೆಗಳನ್ನು ಬೆಳೆಯಲು ಸೂಕ್ತವಾದ ಪ್ರದೇಶಗಳನ್ನು ಗುರುತಿಸಿ ತೋಟಗಾರಿಕೆ ಇಲಾಖೆ ಹಾಗೂ ಎನ್‌ಆರ್‌ಎಲ್‌ಎಂ ಸಹಯೋಗದೊಂದಿಗೆ ಕ್ಲಸ್ಟರ್ ರೂಪದಲ್ಲಿ ಪ್ರದೇಶ ವಿಸ್ತರಣೆ ಮಾಡಲು ಕ್ರಮವಹಿಸುವುದು. ಈ ನಿಟ್ಟಿನಲ್ಲಿ ಪ್ರತಿ ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

a. <u>ಗ್ರಾಮೀಣಾಭಿವೃದ್ಧಿ ಇಲಾಖೆ:</u>

- ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಅನುಮತಿಸಿದ ಚಟುವಟಿಕೆಗಳಂತೆ ಸದರಿ ಬೆಳೆಗಳ ಪ್ರದೇಶಾಭಿವೃದ್ಧಿಗೆ (Backward linkage) ಅನುದಾನದ ಅವಕಾಶ ಕಲ್ಪಿಸುವುದು.
- ಬೆಳೆಗಳ ಉತ್ಪನ್ನಗಳ ಮಾರಾಟಕ್ಕೆ ಅವಶ್ಯಕ ಗ್ರಾಮೀಣ ಮಾರುಕಟ್ಟೆ ವ್ಯವಸ್ಥೆಯ ಮೂಲಭೂತ ಸೌಲಭ್ಯಗಳನ್ನು ನರೇಗಾ ಯೋಜನೆಯಡಿ ಸೃಜಿಸುವುದು.
- ಸದರಿ ಬೆಳೆಗಳ ಅಭಿವೃದ್ಧಿಗೆ ಪೂರಕವಾಗಿ ಸೂಕ್ತ ತಾಂತ್ರಿಕ ತರಬೇತಿಯನ್ನು ತಾಂತ್ರಿಕ ಇಲಾಖೆಗಳ ಸಹಯೋಗದೊಂದಿಗೆ ಆಯೋಜಿಸಲು ಸಹಕಾರಿಸುವುದು.
- ಸದರಿ ಮಹತ್ವಕಾಂಕ್ಷೆ ಕಾರ್ಯಕ್ರಮದ ಅನುಷ್ಠಾನಕ್ಕೆ ತಾಲ್ಲೂಕು ಮಟ್ಟದಲ್ಲಿ ಸಮನ್ವಯ ಅಧಿಕಾರಿಯಾಗಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾರ್ಯನಿರ್ವಹಿಸುವುದು.
- ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿಗಳು ಜಿಲ್ಲಾ ಮಟ್ಟದಲ್ಲಿ ಜಂಟಿ ನೋಡಲ್ ಅಧಿಕಾರಿಯಾಗಿ ತೋಟಗಾರಿಕೆ ಉಪ ನಿರ್ದೇಶಕರೊಂದಿಗೆ ಕಾರ್ಯನಿರ್ವಹಿಸುವುದು .

b. ತೋಟಗಾರಿಕೆ ಇಲಾಖೆ:

- ನರೇಗಾ ಯೋಜನೆಯಡಿ ಸದರಿ ಬೆಳೆಗಳ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಇಲಾಖೆಯಾಗಿ ಕಾರ್ಯನಿರ್ವಹಿಸುವುದು.
- ಸದರಿ ಬೆಳೆಗಳನ್ನು ಬೆಳೆಯಲು ಸೂಕ್ತವಾದ ಪ್ರದೇಶಗಳನ್ನು ಗುರುತಿಸಿ ನಿಯಮಾನುಸಾರ ಕ್ರಿಯಾಯೋಜನೆಯನ್ನು ರೂಪಿಸಿ, ಅನುಮೋದಿಸಿಕೊಂಡು ಗ್ರಾಮ ಪಂಚಾಯತಿ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಳ್ಳುವುದು.
- ಸದರಿ ಬೆಳೆಗಳ ಪ್ರದೇಶಾಭಿವೃದ್ಧಿಗೆ ಬೇಕಾಗುವ ನಿರ್ದಿಷ್ಟ ಗುಣಮಟ್ಟದ ಮತ್ತು ಮೂಲ ಗುಣ ಹೊಂದಿರುವ ಕಸಿಸಸಿಗಳ ಬೇಡಿಕೆಯನ್ನು ನಿರ್ಧರಿಸಿ ಅವುಗಳ ಉತ್ಪಾದನೆ ಮತ್ತು ಸರಬರಾಜು ಮಾಡಲು ಜಿಲ್ಲಾ ಮಟ್ಟದಲ್ಲಿ Production and Supply chain Plan ಸಿದ್ಧಪಡಿಸಿ ಅನುಷ್ಠಾನಗೊಳಿಸುವುದು.
- ಜಿಲ್ಲಾ ಮಟ್ಟದಲ್ಲಿ ತೋಟಗಾರಿಕೆ ಉಪ ನಿರ್ದೇಶಕರನ್ನು ಸದರಿ ಕಾರ್ಯಕ್ರಮ ಅನುಷ್ಠಾನದ ಜಂಟಿ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿಗಳೊಂದಿಗೆ ಕಾರ್ಯನಿರ್ವಹಿಸುವುದು.

c. ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಂಸ್ಥೆ:

- ಸದರಿ ಬೆಳೆಗಳ ಮಹತ್ವ ಕುರಿತು ಪ್ರಚಾರ ಕಾರ್ಯಕ್ರದಲ್ಲಿ ಸಹಕರಿಸುವುದು.
- ಸದರಿ ಬೆಳೆಗಳ ರೈತ ಉತ್ಪಾದಕ ಕಂಪನಿಗಳಿಗೆ ಸಾಂಸ್ಥಿಕ ಮಾರುಕಟ್ಟೆಗೆ ಪೂರಕ ಮೂಲಭೂತ ಸೌಲಭ್ಯಗಳ ಸೃಷ್ಟಿಗೆ ಅಗತ್ಯ ಆರ್ಥಿಕ ಸಹಾಯಧನ ಒದಗಿಸುವುದು.
- ಸದರಿ ಬೆಳೆಗಳ ಉತ್ಪನ್ನಗಳ Forward linkage ಪೂರಕ ಮೌಲವರ್ಧನೆ (Value addition) ಮತ್ತು ಮಾರುಕಟ್ಟೆ (Marketing) ಕೌಶಲ್ಯ ತರಬೇತಿ ನೀಡುವುದು.
- ಸದರಿ ಬೆಳೆಗಳ ಉತ್ಪನ್ನಗಳಿಗೆ ಮಾರಾಟಕ್ಕೆ ಸೂಕ್ತ ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ digital Marketing ವೇದಿಕೆ ಸೃಜಿಸುವುದು.
- ಯೋಜನೆಯ ಅನುಷ್ಠಾನದಲ್ಲಿ ಇತರೆ ಇಲಾಖೆಗಳು ಜರುಗಿಸುವ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಸ್ವಸಹಾಯ ಸಂಘಗಳು ಪಾಲ್ಗೊಳ್ಳಲು ಅಗತ್ಯ ನಿರ್ದೇಶನಗಳನ್ನು ನೀಡುವುದು.

4. ತಾಂತ್ರಿಕ ಅಂದಾಜು ಪಟ್ಟಿಗಳನ್ನು ತಯಾರಿಕೆ:

- ತಾಂತ್ರಿಕ ಅಂದಾಜು ಪಟ್ಟಿಗಳನ್ನು ತಯಾರಿಸಲು ತೋಟಗಾರಿಕೆ ಇಲಾಖೆಯು ಅನುಮೋದಿತ ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲು ಕ್ರಮವಹಿಸುವುದು.
- ಕಾಮಗಾರಿಗಳ ಅಳತೆಯನ್ನು ನಮೂದಿಸಲು ಅಗತ್ಯವಿರುವ ಸೇವೆಯನ್ನು ನರೇಗಾ ತಾಂತ್ರಿಕ ಸಹಾಯಕರುಗಳ ಮೂಲಕ ಪಡೆಯಲು ಕ್ರಮವಹಿಸುವುದು.

5. <u>ಅನುಷ್ಠಾನದ ಕಾಲಮಿತಿ:</u>

ಸದರಿ ಕಾರ್ಯಕ್ರಮವನ್ನು 2 ಹಂತದಲ್ಲಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದೆ. **ಮೊದಲನೇ ಹಂತದಲ್ಲಿ** ಅಪ್ರಧಾನ ಹಣ್ಣುಗಳಿಗೆ ಸೂಕ್ತವಾದ ಗುಚ್ಛ ಗ್ರಾಮಗಳನ್ನು (Cluster Villages) ಆಯ್ಕೆ ಮಾಡುವುದು, ಫಲಾನುಭವಿಗಳ ಆಯ್ಕೆ, ಉತ್ಪಾದನೆ ಮತ್ತು ಮೌಲ್ಯವರ್ಧನೆಗೆ ಕೌಶಲ್ಯ ತರಬೇತಿ ಹಾಗೂ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಪ್ರದೇಶಾಭಿವೃದ್ಧಿಗೆ ಅವಶ್ಯಕ ಗುಣಮಟ್ಟದ ಕಸಿಸಸಿಗಳ ಉತ್ಪಾದನೆ ನರ್ಸರಿ ಚಟುವಟಿಕೆ ತೆಗೆದುಕೊಳ್ಳುವುದು.

**ಎರಡನೇ ಹಂತದಲ್ಲಿ** ಆಯ್ಕೆಯಾದ ಫಲಾನುಭವಿಗಳನ್ನು ಆಯ್ಕೆಯಾದ ಗುಚ್ಛ ಗ್ರಾಮಗಳ (Cluster Villages) ಗ್ರಾಮ ಪಂಚಾಯತಿಯ ಕ್ರಿಯಾ ಯೋಜನೆಯಲ್ಲಿ ಸೇರಿಸುವುದು. ಯೋಜನೆಯ ಮಾರ್ಗಸೂಚಿಯಂತೆ ಅಂದಾಜುಪಟ್ಟಿಯನ್ನು ಅನುಮೋದನೆ ಪಡೆದುಕೊಂಡು ಪ್ರದೇಶ ವಿಸ್ತರಣೆ ಚಟುವಟಿಕೆಗಳನ್ನು ಕೈಗೊಳ್ಳುವುದು. ಫಲಾನುಭವಿಗಳಿಗೆ ಸದರಿ ಬೆಳೆಗಳ ವೈಜ್ಞಾನಿಕ ಹಾಗೂ ರಫ್ತು ಗುಣಮಟ್ಟದ ಉತ್ಪಾದನಾ ತಾಂತ್ರಿಕತೆಯ ಬಗ್ಗೆ ತರಬೇತಿ ಅಪ್ರಧಾನ ಹಣ್ಣುಗಳ ಉತ್ಪನ್ನಗಳ ಮೌಲ್ಯವರ್ಧನೆ, ಪ್ಯಾಕಿಂಗ್, ಶೇಖರಣೆ, ಮಾರುಕಟ್ಟೆ ಕುರಿತು ಕೌಶಲ್ಯ ತರಬೇತಿ ನೀಡುವುದರೊಂದಿಗೆ ಸ್ಥಳೀಯ ಗುಚ್ಛ ಗ್ರಾಮಗಳ **ರೈತ ಉತ್ಪಾದಕ ಕಂಪನಿಗಳ** ಸ್ಥಾಪನೆಗೆ ಪ್ರೋತ್ಸಾಹಿಸುವುದು.

**2A. <u>ಮೊದಲನೇ ಹಂತ- 2022-23ನೇ ಸಾಲಿನ ಆರ್ಥಿಕ ವರ್ಷ:</u>**

| ಕ್ರ. ಸಂ | ಚಟುವಟಿಕೆಗಳು | ಅವಧಿ | ಇಲಾಖೆಗಳು | ಸಮನ್ವಯ ಅಧಿಕಾರಿ | ನೋಡಲ್ ಅಧಿಕಾರಿಗಳು |
|---|---|---|---|---|---|
| 1 | ಅಪ್ರಧಾನ ಹಣ್ಣುಗಳಿಗೆ ಸೂಕ್ತವಾದ ಗುಚ್ಛ ಗ್ರಾಮಗಳನ್ನು (Cluster Villages) ಆಯ್ಕೆ ಮಾಡುವುದು | Dec-2022 | ಎನ್‌ಆರ್‌ಎಲ್, ಗ್ರಾಮೀಣಾಭಿವೃದ್ಧಿ ಮತ್ತು ತೋಟಗಾರಿಕೆ ಇಲಾಖೆ | EO, SADH ಮತ್ತು DPMU | DS & DDH |
| 2 | ಫಲಾನುಭವಿಗಳ ಆಯ್ಕೆ | Dec-2022 | ಎನ್‌ಆರ್‌ಎಲ್‌ಎಮ್, ಮತ್ತು ತೋಟಗಾರಿಕೆ ಇಲಾಖೆ | | |
| 3 | ಉತ್ಪಾದನೆ ಮತ್ತು ಮೌಲ್ಯವರ್ಧನೆಗೆ ಕೌಶಲ್ಯ ತರಬೇತಿ | Dec-2022 | ಎನ್‌ಆರ್‌ಎಲ್‌ಎಮ್, ಮತ್ತು ತೋಟಗಾರಿಕೆ ಇಲಾಖೆ | | |
| 4 | ನರ್ಸರಿ ಚಟುವಟಿಕೆಯನ್ನು ಪ್ರಸ್ತುತ ವರ್ಷದ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಪ್ರದೇಶಾಭಿವೃದ್ಧಿಗೆ ಅವಶ್ಯಕ ಗುಣಮಟ್ಟದ ಕಸಿಸಸಿಗಳ ಉತ್ಪಾದನೆ. | Dec 2022-March-2023 | ಗ್ರಾಮೀಣಾಭಿವೃದ್ಧಿ ಮತ್ತು ತೋಟಗಾರಿಕೆ ಇಲಾಖೆ | | |
| 5 | ಕ್ರಿಯಾಯೋಜನೆ ಅನುಮೋದನೆ ಮತ್ತು ಅನುದಾನ ನೀಡುವಿಕೆ | Dec-2022 | ಗ್ರಾಮೀಣಾಭಿವೃದ್ಧಿ ಇಲಾಖೆ | | |
| 6 | ಗುಚ್ಛ ಗ್ರಾಮಗಳ ಅಪ್ರಧಾನ ಹಣ್ಣಿನ ಬೆಳೆಗಳ ಪ್ರದೇಶಾಭಿವೃದ್ಧಿ ಕ್ರಿಯಾ ಯೋಜನೆ ತಯಾರಿಕೆ ಮತ್ತು ಅನುಮೋದನೆ | Dec-2022 | ಎನ್‌ಆರ್‌ಎಲ್, ಗ್ರಾಮೀಣಾಭಿವೃದ್ಧಿ ಮತ್ತು ತೋಟಗಾರಿಕೆ ಇಲಾಖೆ | | |

2B. ಎರಡನೇ ಹಂತ- 2023-24ನೇ ಸಾಲಿನ ಆರ್ಥಿಕ ವರ್ಷ:

| ಕ್ರ. ಸಂ | ಚಟುವಟಿಕೆಗಳು | ಅವಧಿ | ಇಲಾಖೆಗಳು | ಸಮನ್ವಯ ಅಧಿಕಾರಿ | ನೋಡಲ್ ಅಧಿಕಾರಿಗಳು |
|---|---|---|---|---|---|
| 1 | ಅಂದಾಜು ಪಟ್ಟಿ ತಯಾರಿಕೆ ಮತ್ತು ಅನುಮೋದನೆ | May-2023 | ಗ್ರಾಮೀಣಾಭಿವೃದ್ಧಿ ಮತ್ತು ತೋಟಗಾರಿಕೆ ಇಲಾಖೆ | EO, SADH ಮತ್ತು DPMU | DS & DDH |
| 2 | ಅನುಮೋದಿತದ ಕ್ರಿಯಾ ಯೋಜನೆಯಂತೆ ಆಯ್ಕೆಯಾದ ಫಲಾನುಭವಿಗಳ ಕ್ಷೇತ್ರಗಳಲ್ಲಿ ಪ್ರದೇಶ ವಿಸ್ತರಣೆ ಹಾಗೂ ಅನುಷ್ಠಾನ | June-2023-Oct-2023 | ಎನ್‌ಆರ್‌ಎಲ್‌ಎಮ್, ಮತ್ತು ತೋಟಗಾರಿಕೆ ಇಲಾಖೆ | | |
| 3 | ಕ್ರಿಯಾಯೋಜನೆಯಂತೆ ನರೇಗಾ ಯೋಜನೆಯಡಿ ಅನುಷ್ಠಾನ ಇಲಾಖೆಗಳಿಗೆ ಅನುದಾನ | June-2023-Oct-2023 | ಗ್ರಾಮೀಣಾಭಿವೃದ್ಧಿ ಇಲಾಖೆ | | |
| 4 | ಫಲಾನುಭವಿಗಳಿಗೆ ಸದರಿ ಬೆಳೆಗಳ ವೈಜ್ಞಾನಿಕ ಹಾಗೂ ರಫ್ತು ಗುಣಮಟ್ಟದ ಉತ್ಪಾದನಾ ತಾಂತ್ರಿಕತೆಯ ಬಗ್ಗೆ ತರಬೇತಿ | May-Oct 2023 | ಎನ್‌ಆರ್‌ಎಲ್‌ಎಮ್, ಮತ್ತು ತೋಟಗಾರಿಕೆ ಇಲಾಖೆ | | |
| 5 | ಅಪ್ರಧಾನ ಹಣ್ಣುಗಳ ಉತ್ಪನ್ನಗಳ ಮೌಲ್ಯವರ್ಧನೆ, ಪ್ಯಾಕಿಂಗ್, ಶೇಖರಣೆ, ಮಾರುಕಟ್ಟೆ ಕುರಿತು ಕೌಶಲ್ಯ ತರಬೇತಿ | Oct-March 2024 | ಎನ್‌ಆರ್‌ಎಲ್‌ಎಮ್, ಮತ್ತು ತೋಟಗಾರಿಕೆ ಇಲಾಖೆ | | |
| 6 | ಸ್ಥಳೀಯವಾಗಿ ಹಾಗೂ ವೈಜ್ಞಾನಿಕವಾಗಿ ಅಪ್ರಧಾನ ಹಣ್ಣುಗಳ ಉತ್ಪನ್ನಗಳ ಮೌಲ್ಯವರ್ಧನೆಗೆ ಪ್ರೋತ್ಸಾಹ ಚಟುವಟಿಕೆಗಳು | - | ಎನ್‌ಆರ್‌ಎಲ್‌ಎಮ್, ಮತ್ತು ತೋಟಗಾರಿಕೆ ಇಲಾಖೆ | | |

6. ಅಪ್ರಧಾನ ಹಣ್ಣಿನ ಬೆಳೆಗಳ ಅನುಷ್ಠಾನದ ಗುರಿ:

ಅಪ್ರಧಾನ ಹಣ್ಣಿನ ಬೆಳೆಗಳ ಪ್ರದೇಶ ವಿಸ್ತರಣೆಯನ್ನು ಮಾರುಕಟ್ಟೆ, ಮೌಲ್ಯವರ್ಧನೆ ಹಾಗೂ ತಾಂತ್ರಿಕ ಕೌಶಲ್ಯ ತರಬೇತಿಗೆ ಅನುಕೂಲವಾಗಲು ಗುಚ್ಛ ಗ್ರಾಮಗಳ ಮಾದರಿಯಲ್ಲಿ ಅನುಷ್ಠಾನಿಸುವುದು, ಪ್ರತಿ ಗುಚ್ಛದಲ್ಲಿ ಕನಿಷ್ಠ 10 ಎಕರೆ ಗರಿಷ್ಠ 25 ಎಕರೆ ಪ್ರದೇಶ ವಿಸ್ತರಣೆ ಮಾಡುವುದು. ರಾಜ್ಯದಲ್ಲಿ ಒಟ್ಟು 500 ಗುಚ್ಛ ಗ್ರಾಮಗಳನ್ನು ಗುರುತಿಸುವುದು. (ಅನುಬಂಧ-1)

7. ಬೆಳೆ ಪದ್ಧತಿ:

ಅಪ್ರಧಾನ ಹಣ್ಣಿನ ಬೆಳೆಗಳ ಪ್ರದೇಶ ವಿಸ್ತರಣೆಯನ್ನು ಗುಚ್ಛಗ್ರಾಮಗಳಲ್ಲಿ ಸ್ಥಳೀಯ ರೈತರ ಬೇಡಿಕೆ ಹಾಗೂ ಬೆಳೆಯ ಉತ್ಪನ್ನಗಳ ಮಾರುಕಟ್ಟೆ ಅನುಕೂಲತೆ ಮತ್ತು ನಿರಂತರ ಆಧಾಯ ಪಡೆಯುವ ದೃಷ್ಟಿಕೋನದಿಂದ ಅಪ್ರಧಾನ ಹಣ್ಣಿನ ಬೆಳೆಗಳನ್ನು ತೋಟಗಾರಿಕಾ ಬೆಳೆ ಪದ್ಧತಿಗಳಾದ

ಮುಖ್ಯ ಬೆಳೆಯಾಗಿ ಅಥವಾ ಮಿಶ್ರ ಬೆಳೆಯಾಗಿ ಅಥವಾ ಅಂತರ ಬೆಳೆಯಾಗಿ ಅಥವಾ ಕ್ಷೇತ್ರ ಬದು ಬೆಳೆಯಾಗಿ ಬೆಳೆಯಬಹುದಾಗಿದೆ.

**8. ಅನುದಾನ:**

ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಅವಶ್ಯಕ ಸಸಿ ಸಸಿಗಳ ಉತ್ಪಾದನೆಗೆ ನರ್ಸರಿ ಚಟುವಟಿಕೆ ಹಾಗೂ ಬಹುವಾರ್ಷಿಕ ಅಪ್ರಧಾನ ಹಣ್ಣಿನ ಬೆಳೆಗಳ ಪ್ರದೇಶಾಭಿವೃದ್ಧಿ ಚಟುವಟಿಕೆಗಳನ್ನು ನರೇಗಾ ಅನುದಾನದಡಿ ಅನುಮೋದಿತ ಅಂದಾಜು ಪಟ್ಟಿಯಂತೆ ಅನುಷ್ಠಾನ ಇಲಾಖೆಯು ಅನುಷ್ಠಾನಗೊಳಿಸುವುದು. ಒಗ್ಗೂಡಿಸುವಿಕೆ ಚಟುವಟಿಕೆಗಳಾದ ತರಬೇತಿ ಕೌಶಲ್ಯಾಭಿವೃದ್ಧಿ, ಮೌಲ್ಯವರ್ಧನೆ, ಮಾರುಕಟ್ಟೆ ಸರಪಳಿ ಅಭಿವೃದ್ಧಿ ಇತ್ಯಾದಿ ಚಟುವಟಿಕೆಗಳನ್ನು ತೋಟಗಾರಿಕೆ ಇಲಾಖೆ ಮತ್ತು ಎನ್‌ಆರ್‌ಎಲ್‌ಎಮ್ ಇಲಾಖೆಗಳು ಅನುಷ್ಠಾನಿಸುವ ಯೋಜನೆಗಳ (ಕೇಂದ್ರ ಮತ್ತು ರಾಜ್ಯ ಸರ್ಕಾರದ) ಮಾರ್ಗಸೂಚಿಗಳಂತೆ ಅನುಷ್ಠಾನಗೊಳಿಸುವುದು.

**9. ದಾಖಲೀಕರಣ:**

ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನ ಪೂರ್ವದಲ್ಲಿಯ ವಾಸ್ತವ ಸ್ಥಿತಿ ಹಾಗೂ ಅನುಷ್ಠಾನ ಹಂತದ ಚಟುವಟಿಕೆಗಳ ಪ್ರಗತಿ, ಮೌಲ್ಯವರ್ಧಿತ ಚಟುವಟಿಕೆಗಳು ಹಾಗೂ ಮಾರುಕಟ್ಟೆಯ ಸರಪಳಿ ಅಭಿವೃದ್ಧಿ ಇತ್ಯಾದಿಗಳ ದಾಖಲೀಕರಣವನ್ನು ಮಾಡುವುದು. ಇದಕ್ಕೆ ತಗಲುವ ವೆಚ್ಚಗಳನ್ನು ನರೇಗಾ ಯೋಜನೆಯ IEC ಚಟುವಟಿಕೆಗಳಡಿ ಹಾಗೂ ತೋಟಗಾರಿಕೆ ಮತ್ತು ಎನ್‌ಆರ್‌ಎಲ್‌ಎಮ್ ಇಲಾಖೆಗಳ ಯೋಜನೆಗಳಡಿ ಭರಿಸುವುದು.

**10. ಮೇಲ್ವಿಚಾರಣೆ ಮತ್ತು ಪ್ರಗತಿ ಪರಿಶೀಲನೆ:**

ಸದರಿ ಬೆಳೆಗಳ ಮಹಾತ್ವಾಕಾಂಕ್ಷೆ ಕಾರ್ಯಕ್ರಮದ ಕಾಲಮಿತಿ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ನಿಗಧಿತವಾಗಿ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಜರುಗಿಸಿ ವರದಿ ಸಲ್ಲಿಸುವುದು. ಹಾಗೂ ರಾಜ್ಯ ಮಟ್ಟದಲ್ಲಿ **ಪ್ರತಿ ತಿಂಗಳ 4ನೇ ಶುಕ್ರವಾರ ಪ್ರಗತಿ** ಪರಿಶೀಲನೆಯನ್ನು ಕೈಗೊಳ್ಳಲಾಗುತ್ತದೆ. **(ಅನುಬಂಧ-2)**

| | | |
|---|---|---|
| ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು. | ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಅಭಿಯಾನ ನಿರ್ದೇಶಕರು, ಡೇ-ಎನ್‌ಆರ್‌ಎಲ್‌ಎಮ್, ಬೆಂಗಳೂರು. |

**<u>ಇವರಿಗೆ,</u>**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ ರವರ ಆಪ್ತ ಶಾಖೆಗೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ ರವರ ಆಪ್ತ ಶಾಖೆಗೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ರವರ ಆಪ್ತ ಶಾಖೆಗೆ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ರವರ ಆಪ್ತ ಶಾಖೆಗೆ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು.

ಅನುಬಂಧ-1

| Sl.No | Area expansion of minor fruits | | | | Planting Material Demand and Supply Plan | | |
|---|---|---|---|---|---|---|---|
| | District | No. of clusters | Average Area/Cluster in Acre | Total Area | Planting Material Demand @ 150 Per Acre | Department Nursery (80%) | GPLF Nursery (20%) |
| 1 | Bagalkote | 12 | 15 | 180 | 27000 | 21600 | 5400 |
| 2 | Bengaluru | 8 | 15 | 120 | 18000 | 14400 | 3600 |
| 3 | Bengaluru rural | 10 | 15 | 150 | 22500 | 18000 | 4500 |
| 4 | Belagavi | 30 | 15 | 450 | 67500 | 54000 | 13500 |
| 5 | Ballari | 12 | 15 | 180 | 27000 | 21600 | 5400 |
| 6 | Bidar | 30 | 15 | 450 | 67500 | 54000 | 13500 |
| 7 | Vijayapura | 20 | 15 | 300 | 45000 | 36000 | 9000 |
| 8 | Chamarajanagara | 14 | 15 | 210 | 31500 | 25200 | 6300 |
| 9 | Chikkaballapura | 20 | 15 | 300 | 45000 | 36000 | 9000 |
| 10 | Chikkamagaluru | 20 | 15 | 300 | 45000 | 36000 | 9000 |
| 11 | Chitradurga | 15 | 15 | 225 | 33750 | 27000 | 6750 |
| 12 | Dakshina kannada | 12 | 15 | 180 | 27000 | 21600 | 5400 |
| 13 | Davanagere | 18 | 15 | 270 | 40500 | 32400 | 8100 |
| 14 | Dharwar | 10 | 15 | 150 | 22500 | 18000 | 4500 |
| 15 | Gadag | 10 | 15 | 150 | 22500 | 18000 | 4500 |
| 16 | Kalaburagi | 30 | 15 | 450 | 67500 | 54000 | 13500 |
| 17 | Hassan | 20 | 15 | 300 | 45000 | 36000 | 9000 |
| 18 | Haveri | 12 | 15 | 180 | 27000 | 21600 | 5400 |
| 19 | Kodagu | 8 | 15 | 120 | 18000 | 14400 | 3600 |
| 20 | Kolar | 20 | 15 | 300 | 45000 | 36000 | 9000 |
| 21 | Koppal | 20 | 15 | 300 | 45000 | 36000 | 9000 |
| 22 | Mandya | 15 | 15 | 225 | 33750 | 27000 | 6750 |
| 23 | Mysuru | 20 | 15 | 300 | 45000 | 36000 | 9000 |
| 24 | Raichur | 15 | 15 | 225 | 33750 | 27000 | 6750 |
| 25 | Ramanagara | 12 | 15 | 180 | 27000 | 21600 | 5400 |
| 26 | Shivamogga | 20 | 15 | 300 | 45000 | 36000 | 9000 |
| 27 | Tumakuru | 25 | 15 | 375 | 56250 | 45000 | 11250 |
| 28 | Udupi | 5 | 15 | 75 | 11250 | 9000 | 2250 |
| 29 | Uttara kannada | 15 | 15 | 225 | 33750 | 27000 | 6750 |
| 30 | Vijayanagar | 10 | 15 | 150 | 22500 | 18000 | 4500 |
| 31 | Yadgir | 12 | 15 | 180 | 27000 | 21600 | 5400 |
| Total | | 500 | | 7500 | 1125000 | 900000 | 225000 |

ಅನುಬಂಧ-2

**ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಅಪ್ರಧಾನ ಹಣ್ಣಿನ ಬೆಳೆಗಳ ಪ್ರದೇಶಾಭಿವೃದ್ಧಿ ಹಾಗೂ ಗ್ರಾಮೀಣ ಮಾರುಕಟ್ಟೆ ಅನುಷ್ಠಾನದ ಪ್ರಗತಿ ವರದಿ**

| Sl.No | Activities | District | Taluk | Crop | No of cluster Identified | No of beneficiaries Selected | Whether included in G. P Approved Action Plan | Present status of planting material available | | | | Target | | Achievement | |
|---|---|---|---|---|---|---|---|---|---|---|---|---|---|---|---|
| | | | | | | | | Department Farm | GPLF Nursery | Farmers | EoI/Private | Physical | Financial | Physical | Financial |
| 1 | AEP | | | | | | | | | | | | | | |
| 2 | Rural Haat | | | | | | | | | | | | | | |
| 3 | | | | | | | | | | | | | | | |
| 4 | | | | | | | | | | | | | | | |
| 5 | | | | | | | | | | | | | | | |

ತೋಟಗಾರಿಕೆ ಉಪ ನಿರ್ದೇಶಕರು
ಜಿಲ್ಲಾ ಪಂಚಾಯತಿ ..